ಕೇಂದ್ರದಲ್ಲಿ ಸರ್ಕಾರಿ ಬಸ್ ನಿಲುಗಡೆಯ ವ್ಯವಸ್ಥೆ ಮಾಡಲಾಗಿದೆ.

ಮಂಡ್ಯ ಜಿಲ್ಲೆಯಲ್ಲಿ ಡಿಪಿಇಪಿಡಿ ಯೋಜನೆಯ ಅನುಷ್ಠಾನ.

2321(3079)

ಶ್ರೀ ಆತ್ಮಾನಂದ ಎಂ.ಎಸ್.(ಮಂಡ್ಯ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯಲ್ಲಿ ಡಿಪಿಇಪಿ ಯೋಜನೆ ಅನುಷ್ಠಾನದಲ್ಲಿದೆಯೇ?

ಆ) ಹಾಗಿದ್ದಲ್ಲಿ, ಈ ಯೋಜನೆಯ ಅನುಷ್ಠಾನದ ಪ್ರಗತಿಯೇನು?

ಇ) ಈ ಯೋಜನೆಗೆ ಈವರೆವಿಗೆ ವೆಚ್ಚವಾಗಿರುವ ಮೊತ್ತವೆಷ್ಟು?

ಈ) ಈ ಬಗೆಗಿನ ವಿವರಗಳೇನು?

ಶ್ರೀ ಹೆಚ್.ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಇದೆ.

ಆ) ಡಿ.ಪಿ.ಇ.ಪಿ. ಯೋಜನೆಯು ಮಂಡ್ಯ ಜಿಲ್ಲೆಯಲ್ಲಿ ಅನುಷ್ಠಾನಗೊಂಡ ಮೇಲೆ ಶಿಕ್ಷಣ ಕ್ಷೇತ್ರದ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಪ್ರಗತಿಯಾಗಿದೆ. ಶಾಲೆ ಬಿಡುವ ಮಕ್ಕಳ ಪ್ರಮಾಣ ಒಟ್ಟಾರೆ ಶೇಕಡ 4 ಕ್ಕಿಂತಲೂ ಕಡಿಮೆಯಾಗಿದೆ. ಡಿ.ಪಿ.ಇ.ಪಿ.ಯ ವತಿಯ ಮಧ್ಯಕಾಲೀನ ಸರ್ವೆಯಿಂದ ಮತ್ತು 1 ಮತ್ತು 2ನೇ ತರಗತಿಯ ಭಾಷೆಯಲ್ಲಿ ಹೆಚ್ಚುವರಿಯಾಗಿ ಶೇಕಡ 9.49ರಷ್ಟು ಪ್ರಗತಿ ಸಾಧಿಸಿದೆ. ಅಂತೆಯೇ 1 ಮತ್ತು 2ನೇ ತರಗತಿಯ ಗಣಿತ ವಿಷಯದಲ್ಲಿ ಶೇಕಡ 19.67ರಷ್ಟು ಪ್ರಗತಿ ಸಾಧಿಸಿದೆ. ಡಿ.ಪಿ.ಇ.ಪಿ. ವತಿಯಿಂದ 91 ಪ್ರಾಥಮಿಕ ಶಾಲೆಗಳನ್ನು ಹೊಸದಾಗಿ ತೆರೆದಿದ್ದು 182 ಪ್ರಾಥಮಿಕ ಶಾಲಾ ಶಿಕ್ಷಕರನ್ನು ನೇಮಿಸಿಕೊಳ್ಳಲಾಗಿದೆ. ಅಂತೆಯೇ ಡಿ.ಪಿ.ಇ.ಪಿ ವತಿಯಿಂದ 247 ಶಾಲೆಗಳನ್ನು 5ನೇ ತರಗತಿಗೆ ಮೇಲ್ದರ್ಜೆಗೆ ಏರಿಸಲಾಗಿದೆ. 214 ಹೆಣ್ಣು ಮಕ್ಕಳ ಶಾಲೆಗಳಿಗೆ ನೀರು ಮತ್ತು ಶೌಚಾಲಯದ ವ್ಯವಸ್ಥೆ ಮಾಡಲಾಗಿದೆ. ಶಾಲೆ ಬಿಟ್ಟ ಮಕ್ಕಳಿಗೋಸ್ಕರ 80 ಪರ್ಯಾಯ ಶಾಲೆಗಳನ್ನು ತೆರೆಯಲಾಗಿದೆ. ಮತ್ತು ಆ ಪರ್ಯಾಯ ಶಾಲೆಗಳಿಗೆ ವಿಶೇಷವಾಗಿ ಹೆಣ್ಣು ಮಕ್ಕಳನ್ನೇ ಶಿಕ್ಷಕ ಪ್ರೇರಕಿಯರಾಗಿ ಆಯ್ಕೆ ಮಾಡಲಾಗಿದೆ.

1800 ಶಾಲೆಗಳಿಗೆ ಅಗತ್ಯ ವಸ್ತುಗಳನ್ನು ಖರೀದಿಸಲು ಪ್ರತಿ ವರ್ಷ 2000.00 ರೂ. ಶಾಲಾ ಅನುದಾನವನ್ನು 4253 ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಪ್ರತಿ ವರ್ಷ 500.00 ರೂ. ಶಿಕ್ಷಕ ಅನುದಾನವನ್ನು ನೀಡಲಾಗಿದೆ. ಪ್ರತಿ ವರ್ಷ 49 ಶಾಲೆಗಳಿಗೆ ಉತ್ತಮ ವಿಜಿಸಿ ಹಾಗೂ ನಾಲಾ ಪ್ರಶಸ್ತಿಗಳನ್ನು ನೀಡಲಾಗಿದೆ. ಈ ಉತ್ತೇಜಿತ ಬಹುಮಾನಗಳಿಂದ ಶಾಲಾ ಹೊರಾಂಗಣ ಹಾಗೂ ಒಳಾಂಗಣ ಪ್ರಗತಿ ಹಾಗೂ ಶಾಲೆಗಳಿಗೆ ವಿಶೇಷವಾಗಿ ಕಾಂಪೌಂಡ್‌ಗಳನ್ನು ನಿರ್ಮಾಣ ಮಾಡಲಾಗಿದೆ.

ಇ) ಈ ಯೋಜನೆಗೆ ಈವರೆವಿಗೆ ಒಟ್ಟು 25.87 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದೆ.

ಈ) ವಿವರಗಳು ಈ ಕೆಳಕಂಡಂತಿದೆ

ಕ್ರಮ ಸಂಖ್ಯೆ	ವಿವರ	ವೆಚ್ಚ
1)	ಸಿವಿಲ್ ಕಾಮಗಾರಿಗಳು	664.62
2)	ವೇತನ	1014.41
3)	ತರಬೇತಿಗಳು	179.84
4)	ಶಿಕ್ಷಕರ ಅನುದಾನ	98.28
5)	ಶಾಲಾ ಅನುದಾನ	141.02
6)	ಪಿಠೋಪಕರಣ	128.71
7)	ಜಾಗೃತಿ ಆಂದೋಲನ	79.46
8)	ಎಂ.ಎಲ್.ಎಲ್. ಪುಸ್ತಕ	168.55
9)	ಪರ್ಯಾಯ ಶಾಲೆ	48.10
10)	ಸಂದರ್ಶನ ಮತ್ತು ಸಂಶೋಧನೆ	0.16
11)	ಇತರೆ	64.24
	ಒಟ್ಟು	2587.39